# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಆಳಂದ.
## ಅಸಲು ದಾವೆ ಸಂಖ್ಯೆಃ 19/2019

01. ಮೆಹಬೂಬ ಸಾಬ ತಂದೆ ಅಬ್ದುಲ ಅಲಿ @ ಭಾಷಾಸಾಬ ಅಂಬಲಗಿ.

...ವಾದಿ .

01. ದೌಲತಬೀ ಗಂಡ ಲಾಲ ಅಹ್ಮದ ಮುಲ್ಲಾನವಾಲೆ .

...ಪ್ರತಿವಾದಿ.

**ವಿವಾದಾಂಶಗಳು.**

1) ವಾದಿ ತಾನು ದಾವಾ ಸ್ವತ್ತಿನ ಮಾಲೀಕ ಮತ್ತು ಸ್ವಾಧೀನಾನುಭವದಾರ ಎಂಬುದನ್ನು ರುಜುವಾತುಪಡಿಸುತ್ತಾರೆಯೇ?

2) ದಾವಾ ಸ್ವತ್ತು ಪೂರ್ವದಲ್ಲಿ ಗುಡುಮಾ ಕೊಂ ನತಾಬಸಾಬ ಮುಲ್ಲನರವರಿಗೆ ಸೇರಿದ್ದು, ಸದರಿ ಸ್ವತ್ತನ್ನು ವಾದಿಯ ತಂದೆಯಾದ ಬಾಷಾಸಾಬರವರಿಗೆ ಗುಡುಮಾರವರು ದಿನಾಂಕಃ 08.06.1970 ರಂದು ರೂಪಾಯಿ 2,000/- ಗಳಿಗೆ ನೋಂದಾಯಿತ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂಬುದನ್ನು ವಾದಿಯು ರುಜುವಾತುಪಡಿಸುತ್ತಾರೆಯೇ?

3) ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನ ಅನುಭವಕ್ಕೆ ತೊಂದರೆ ಉಂಟು ಮಾಡಿರುತ್ತಾರೆಂದು ವಾದಿಯು ರುಜುವಾತುಪಡಿಸುತ್ತಾರೆಯೇ?

4) ಶ್ರೀಮತಿ ಗುಡುಮಾರವರು ಕೇವಲ 2 ಎಕರೆ 18 ಗುಂಟೆ ಜಮೀನಿನ ಮಾಲೀಕರಿದ್ದು, 4 ಎಕರೆ 18 ಗುಂಟೆ ಜಮೀನನ್ನು ಮಾರಾಟ ಮಾಡುವ ಯಾವುದೇ ಕಾನೂನುಬದ್ದ ಹಕ್ಕು ಇಲ್ಲದಿದ್ದರು ಕೂಡ ಅವರು 4 ಎಕರೆ 18 ಗುಂಟೆ ಜಮೀನು ಮಾರಾಟ ಮಾಡಿದ್ದು ಸದರಿ ಕ್ರಯದ ವ್ಯವಹಾರವು ಶೂನ್ಯ ಮತ್ತು ಕಾನೂನು ಬಾಹಿರ ಹಾಗೂ ತನ್ನ ಮೇಲೆ ಬಂಧನಕಾರಿ ಅಲ್ಲ ಎಂದು ಪ್ರತಿವಾದಿ ರುಜುವಾತುಪಡಿಸುತ್ತಾರೆಯೇ.

5) ಪ್ರತಿವಾದಿ ತಾನು ಸರ್ವೆ ನಂಃ 27 ರಲ್ಲಿ 4 ಎಕರೆ 18 ಗುಂಟೆ ಜಮೀನಿನ ಮಾಲೀಕರು ಎಂಬುದನ್ನು ರುಜುವಾತುಪಡಿಸುತ್ತಾರೆಯೇ

6) ವಾದಿಯು ವಾದ ಪತ್ರದಲ್ಲಿ ಕೇಳಿದಂತೆ ಪರಿಹಾರ ಪಡೆಯಲು ಅರ್ಹರೆ?

7) ಯಾವ ಆದೇಶ ಅಥವಾ ಡಿಕ್ರಿ ?

**ಪ್ರಾಥಮಿಕ ವಿವಾದಾಂಶಗಳು**

1) ವಾದಿ ವಾದಪತ್ರದಲ್ಲಿ ಭರಣ ಮಾಡಿರುವ ನ್ಯಾಯಾಲಯದ ಶುಲ್ಕ ಮತ್ತು ವಾದಿ ಮಾಡಿರುವ ದಾವೆಯ ಮೌಲ್ಯೀಕರಣ ಸರಿಯಾಗಿದೆಯೆ?

2) ವಾದಿ ಸಲ್ಲಿಸಿದ ಈ ದಾವೆಯನ್ನು ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ ಈ ನ್ಯಾಯಾಲಯಕ್ಕೆ ಇದೆಯೆಃ

ದಿನಾಂಕಃ12-07-2019
ಸ್ಥಳಃ ಆಳಂದ

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು**
**ಆಳಂದ**